ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

## ಸಿ.ಸಿ ನಂ. **2187/2014**

ಚಾಸಾಃ 10
ಫ್ರಾಸಾಃ 12

ದಿನಾಂಕಃ **29-06-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಚಂದ್ರಯ್ಯ |
| ತಂದೆಯ/ಗಂಡನ ಹೆಸರು | ಮರಿಯಣ್ಣ |
| ವಯಸ್ಸು | 59 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಅಮ್ಮನಘಟ್ಟ , |

ಮುಖ್ಯ ವಿಚಾರಣೆ ಎಪಿಪಿಯವರಿಂದಃ
ಆರೋಪಿತರು ಈ ದಿನ ಗೈರುಹಾಜರಾಗಿದ್ದು ಆರೋಪಿತರನ್ನು ಗುರುತಿಸುವಿಕೆಗೆ ಆರೋಪಿತರ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ಹೇಳಿದ್ದಾರೆ .
ಚಾಸಾ-**1** ಮತ್ತು **12** ರವರ ಪರಿಚಯ ನನಗೆ ಇದೆ.

ಸಾಕ್ಷಿಯು ಒಂದು ದಾಖಲೆಯ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಮಹಜರ್ ಆಗಿದ್ದು ಅದು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ.2 ಕ್ಕೆ **2014** ನೇ ಇಸವಿಯಲ್ಲಿ ನೊಣವಿನಕೆರೆ ಗ್ರಾಮದ ಮಠದ ಪಾಳ್ಯದ ಚಾಸಾ1 ರವರ ಗಂಡನ ಮನೆಯ ಮುಂದೆ ಸ್ಥಳ ಪಂಚನಾಮೆಯ ಸಮಯದಲ್ಲಿ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಸಾಯಂಕಾಲ **5.00** ರಿಂದ **5.30** ಗಂಟೆಗೆ ಜರುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಚಾಸಾ-**18** ರವರು ಜರುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಮಾಡುವ ಸಮಯದಲ್ಲಿ ನನ್ನ ಜೊತೆಗೆ ಚಾಸಾ-**1** , **11** ಮತ್ತು **12** ರವರು ಹಾಜರಿರುತ್ತಾರೆ. ನಮ್ಮಗಳ ಸಮಕ್ಷಮ ದಲ್ಲಿ ಸದರಿ ಪಂಚನಾಮೆಯನ್ನು ಜರುಗಿಸಿರುತ್ತಾರೆ.

ಸದರಿ ಪಂಚನಾಮೆಯ ಚಕ್ಕುಬಂಧಿ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಹಾಗೂ ದಕ್ಷಿಣಕ್ಕೆ ಆರೋಪಿತರ ಮನೆ ಇರುತ್ತದೆ. ಉತ್ತರಕ್ಕೆ- ಒಂದು ತೋಟ ಇರುತ್ತದೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವ ಕಾರಣ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದಃ

ಈ ಪ್ರಕರಣಕ್ಕೆ ಸಂಬಂದಪಟ್ಟ ಪಂಚನಾಮೆಯನ್ನು ದಿಃ 16-08-2014 ರಂದು ಜರುಗಿಸಿರುತ್ತಾರೆ ಎಂದರೆ ಸರಿ. ತುಂಬಾ ವರ್ಷ ಆಗಿದ್ದರಿಂದ ದಿನಾಂಕವನ್ನು ಮರೆತಿರುತ್ತೇನೆ.

ಪಾಟೀ ಸವಾಲು ಶ್ರೀ ಸಿ.ವಿ. ವಕೀಲರಿಂದಃ

ಚಾಸಾ-1 ರವರು ನನಗೆ ಸುಮಾರು 8 ರಿಂದ 10 ವರ್ಷಗಳಿಂದ ಪರಿಚಯ ಇರುತ್ತಾರೆ. ಚಾಸಾ-1 ರವರು ಈ ದಿನ ನ್ಯಾಯಾಲಯಕ್ಕೆ ನನ್ನ ಜೊತೆ ಬಂದಿರುತ್ತಾರೆ. ಚಾಸಾ-1 ರವರು ಬೆಳಗಿನಿಂದಲೂ ನನ್ನ ಜೊತೆ ಇರುತ್ತಾರೆ. ಅವರೇ ಕರೆ ಮಾಡಿ ನ್ಯಾಯಾಲಯದಲ್ಲಿ ಈ ದಿನ ಹಾಜರಿರುವಂತೆ ಹೇಳಿರುತ್ತಾರೆ. ಚಾಸಾ-1 ರವರ ತಂದೆ ತಾಯಿಯ ಪರಿಚಯ ನನಗೆ ಇಲ್ಲ. ಆದರೆ ಚಾಸಾ-11 ರವರ ಪರಿಚಯ ನನಗೆ ಇದೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಚಾಸಾ-11 ರವರು ಚಾಸಾ-1 ರವರ ಸಂಬಂಧಿಯಾಗಿದ್ದ ಕಾರಣ ಅವರು ನನ್ನನ್ನು ನಿಪಿ. 2 ಕ್ಕೆ ಸಹಿ ಮಾಡಲು ಕರೆದಿರುತ್ತಾರೆ. ಹಾಗೂ ನನ್ನದೇ ಆದ ಒಂದು ವೆಲ್ಡಿಂಗ್ ಶಾಪ್ ಇರುತ್ತದ. ಅದಕ್ಕೆ ಚಾಸಾ-11 ರವರು ಆಗಾಗ ಬೇಟಿ ನೀಡುತ್ತಿದ್ದರು, ಆಗಾಗಿ ಅವರ ಪರಿಚಯ ಇರುತ್ತದೆ. ನಮ್ಮ ಊರಿಗೂ ಹಾಗೂ ನೊಣವಿನ ಕೆರೆಗೂ ಸಮಾರು 61 ಕಿ.ಮೀ.ದೂರ ಇರುತ್ತದೆ. ನಮ್ಮ ಊರು ಗುಬ್ಬಿ ತಾಲ್ಲೂಕಿನಲ್ಲಿ ಇರುತ್ತದೆ. ಹಾಗೂ ನೊಣವಿನಕೆರೆಯು ತಿಪಟೂರು ತಾಲ್ಲೂಕಿನಲ್ಲಿ ಇರುತ್ತದೆ. ನಿಪಿ.2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಸಹಿಯನ್ನು ನಾನು ಘಟನಾ ಸ್ಥಳದಲ್ಲಿ ಹಾಕಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಸದರಿ ಘಟನಾ ಸ್ಥಳಕ್ಕೆ ನಾವು ಸುಮಾರು 5.00 ಸಮಯಕ್ಕೆ ಬಂದಿರುತ್ತೇವೆ. ಯಾವ ಕಾರಣಕ್ಕೆ ನೀವು ಇಲ್ಲಿಗೆ ಬಂದಿದ್ದೀರಿ ಎಂದರೆ ಸಾಕ್ಷಿಯು ಚಾಸಾ-11 ರವರು ವೆಲ್ಡಿಂಗ್ ಕೆಲಸ ಇರುವುದಾಗಿ ತಿಳಿಸಿ ನನ್ನನ್ನು ಅಲ್ಲಿಗೆ ಬರಮಾಡಿಕೊಂಡರು ಎಂದು ನುಡಿಯುತ್ತಾರೆ. ನನ್ನ ಜೊತೆ ಇಬ್ಬರು ಮಲ್ಲಿಕಾರ್ಜುನಯ್ಯ ಎಂಬುವರು ಸಹಿ ಹಾಕಿರುತ್ತಾರೆ.

ನಾನು ಯಾವುದೇ ಸ್ಥಳಕ್ಕೂ ಹೋಗಿರುವುದಿಲ್ಲ. ಯಾವ ಪಂಚನಾಮೆಗೆ ಸ್ಥಳದಲ್ಲಿ ಸಹಿ ಹಾಕಿರುವುದಿಲ್ಲ. ಚಾಸಾ-11 ವರು ನಮ್ಮ ವಿಶ್ವಾಸಿಯಾದ ಕಾರಣ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.

ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

ಸಿ.ಸಿ ನಂ. **1437/2021**

ಚಾಸಾಃ  2
ಫ್ರಾಸಾಃ  2

ದಿನಾಂಕಃ **05-06-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | |
| ತಂದೆಯ/ಗಂಡನ ಹೆಸರು | |
| ವಯಸ್ಸು | 39 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

ಆರೋಪಿ ನನಗೆ ಗೊತ್ತು ಅವರು ನಮ್ಮ  ಊರಿನವರು. ಈ ಕೇಸಿನ ಬಗ್ಗೆ ನನಗೆ ಏನೂ ಗೊತ್ತಿಲ್ಲ ಠಾಣೆಯಲ್ಲಿ ಒಂದು ದಾಖಲಾತಿಗೆ ಸಹಿ ಮಾಡಿ ಎಂದು ಪೊಲೀಸರು ಕೋರಿರುವ ಮೇರೆಗೆ ನಾನು ಸಹಿಯನ್ನು ಮಾಡಿರುತ್ತೇನೆ ಅದನ್ನು ಬಿಟ್ಟು ಬೇರೆ ಯಾವುದೇ ವಿಷಯ ಈ ಕೇಸಿನಲ್ಲಿ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ನೋಡಿ ಸಾಕ್ಷಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯನುಡಿದಿರುವ ಕಾರಣ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದಃ

ದಿಃ

ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಎಲ್ಲಾ ವಿಷಯ ತಿಳಿದು ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಇರುವುದಿಲ್ಲ

ಸಾಕ್ಷಿಯ ನಿರಾಕರಿಸಿದ ಹೇಳಿಕೆಯನ್ನು ನಿಡಿ -2 ಎಂದು ಗುರುತಿಸಲಾಯಿತು. ನಾನು ಆರೋಪಿತರೊಂದಿಗೆ ಸೇರಿಕೊಂಡು ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನ್ಯಾಯಾಲಯಕ್ಕೆ ಹೇಳಿರುತ್ತಾರೆ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.